
**ಕವಿತೆ**



**ಪಿ. ನಂದಕುಮಾರ್**

ಕಲೆ: ಮುರಳೀಧರ್ ರಾಥೋಡ್

# ನದಿಯನ್ನು ದಾಟುತ್ತಾ



ಎಷ್ಟು ಸಾರಿ
ನದಿಯನ್ನು ದಾಟಿರುವೆನೋ
ದಾಟಿದ ಪ್ರತಿಸಾರಿ
ನದಿ ಕಣ್ಣಾಗುಡ್ಡೆಗಳ ಮೇಲೆ
ಕಣ್ಣೀರ ಗೆರೆಗಳನ್ನು ನೋಡಿದೆ

ನದಿ ಮಾತನಾಡಲಿಲ್ಲ

ಎಷ್ಟು ಸಾರಿ
ತೀರದ ಮೇಲೆ ನಡೆದೆನೋ
ನಡೆದ ಪ್ರತಿಸಾರಿ
ತೀರದ ಮೇಲೆ
ರಾಕ್ಷಸಿಯ ಪಾದಮುದ್ರೆಗಳನ್ನು ನೋಡಿದೆ

ತೀರ ಮಾತನಾಡಲಿಲ್ಲ

ಎಷ್ಟು ಸಾರಿ
ನೀರಿನಲ್ಲಿ ಊರಿನ ಪ್ರತಿಬಿಂಬವನ್ನು ಹುಡುಕಿದೆನೋ
ಹುಡುಕಿದ ಪ್ರತಿಸಾರಿ
ವಲಸೆ ಹೋದ ಊರಿನ್ನು
ತಳಗೊತ್ತಿಲ್ಲದ ತೇಲಿದ ಕಲ್ಲುಗಳನ್ನು ನೋಡಿದೆ

ನೀರು ಮಾತನಾಡಲಿಲ್ಲ

ನಾನೀಗ
ನದಿಯ ಮಾತಾಗಿದ್ದೇನೆ